

بِسْمِ اللَّهِ الرَّحْمَنِ الرَّحِيمِ

# ತಖ್ವ – ಅಲ್ಲಾಹನೊಂದಿಗಿರುವ ನಮ್ಮ ಸಂಬಂಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಸ್ಪೈನಿನ **'ಬಶಾರತ್'** ಮಸೀದಿಯಲ್ಲಿ **13–04–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಲೋಕದಲ್ಲಿ ಪ್ರತಿಯೊಂದು ದಿಕ್ಕಿನಲ್ಲಿ ಹಿಂಸಾಚಾರ ಮತ್ತು ಅಸ್ತವ್ಯಸ್ತತೆ ಹಬ್ಬಿದೆ. ಕೆಲವು ಸ್ಥಳಗಳಲ್ಲಿ ಧರ್ಮದ ಹೆಸರಲ್ಲಿ ಗಲಬೆ ಗೊಂದಲಗಳು ಹಬ್ಬಿವೆ. ಕೆಲವು ಸ್ಥಳಗಳಲ್ಲಿ ಲೌಕಿಕ ಶಕ್ತಿಶಾಲಿ ದೇಶಗಳು ತಮ್ಮ ಪ್ರಬಲತೆಯನ್ನು ಸಾಬೀತುಗೊಳಿಸಲು ಹಿಂಸಾಚಾರದಲ್ಲಿ ತೊಡಗಿವೆ. ಕೆಲವು ಕಡೆ ಬಡತನ ಮತ್ತು ಐಶ್ವರ್ಯ ಪರಸ್ಪರ ಎದುರಾಗಿರುವ ಕಾರಣದಿಂದ ಅಶಾಂತಿ ಹಬ್ಬಿದೆ. ಕೆಲವು ಸ್ಥಳಗಳಲ್ಲಿ ರಾಜಕೀಯ ಪಕ್ಷಗಳು ತಮ್ಮ ಅಧಿಕಾರವನ್ನು ಸಂರಕ್ಷಿಸಲು ಗಲಬೆ ಗೊಂದಲಗಳನ್ನು ಸೃಷ್ಟಿಸುತ್ತವೆ. ಕೆಲವು ಕಡೆಗಳಲ್ಲಿ ಮನೆಗಳಲ್ಲಿ ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಜಗಳ ಮತ್ತು ಕಲಹ ಜಾರಿಯಲ್ಲಿವೆ. ಕೆಲವು ಸ್ಥಳಗಳಲ್ಲಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡದ ಕಾರಣ ಜಗಳ ಕಲಹ ಅಸ್ತವ್ಯಸ್ತತೆಗಳು ತಲೆದೋರುತ್ತಿವೆ. ಕೆಲವು ಸ್ಥಳಗಳಲ್ಲಿ ತಮ್ಮ ವಂಶೀಯ ಶ್ರೇಷ್ಠತೆ ಸಾಬೀತುಗೊಳಿಸಲು ಗಲಬೆ ಗೊಂದಲಗಳನ್ನು ಸೃಷ್ಟಿಸಲು ಪ್ರಯತ್ನ ನಡೆಯುತ್ತಿದೆ. ಕೆಲವು ಸ್ಥಳದಲ್ಲಿ ತಮ್ಮ ಹಕ್ಕುಗಳನ್ನು ಪಡೆಯಲು ತಪ್ಪು ಮಾರ್ಗಗಳನ್ನು ಬಳಸಿ ಅಶಾಂತಿ ಮತ್ತು ಅಸ್ತವ್ಯಸ್ತತೆಗಳನ್ನು ಸೃಷ್ಟಿಸಲು ಪ್ರಯತ್ನ ಮಾಡಲಾಗುತ್ತಿದೆ. ಒಟ್ಟಾರೆ ಹೇಳುವುದಾದರೆ ಯಾವುದೇ ಪಾರ್ಶ್ವದಿಂದ ನೋಡಿದರೂ ಲೋಕವು ಗಲಬೆ ಗೊಂದಲ ಮತ್ತು ಅಸ್ತವ್ಯಸ್ತತೆಯಲ್ಲಿ ಸುತ್ತುವರಿಯಲ್ಪಟ್ಟಿದೆ. ಬಡವರು ಅದರಿಂದ ಸುರಕ್ಷಿತರಾಗಿಲ್ಲ. ಐಶ್ವರ್ಯವಂತರೂ ಸುರಕ್ಷಿತರಲ್ಲ. ಅಭಿವೃದ್ಧಿ ಹೊಂದಿದ ದೇಶಗಳು ಅದರಿಂದ ಸುರಕ್ಷಿತರಾಗಿಲ್ಲ. ಕಡಿಮೆ ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಶೀಲ ದೇಶಗಳೂ ಅದರಿಂದ ಸುರಕ್ಷಿತರಲ್ಲ. ಮನುಷ್ಯನು ಈ ಕಾಲಘಟ್ಟದಲ್ಲಿ ಬಹಳ ಅಭಿವೃದ್ಧಿ ಹೊಂದಿರುವುದಾಗಿ ಭಾವಿಸುತ್ತಾನೆ. ಇದು ಜ್ಞಾನ, ಬುದ್ಧಿ ಮತ್ತು ಪ್ರಕಾಶದ ಕಾಲಘಟ್ಟ ಎಂದು ಭಾವಿಸುತ್ತಾನೆ. ವಾಸ್ತವಿಕವಾಗಿ ಅವನು ಅಂಧಕಾರದಲ್ಲಿ ಮುಳುಗಿದ್ದಾನೆ. ಸೃಷ್ಟಿಕರ್ತನನ್ನು ಮರೆತು ಲೌಕಿಕ ಲಾಭದ ಹುಡುಕಾಟದಲ್ಲಿ ಮತ್ತು ಅದನ್ನೇ ತನ್ನ ಆರಾಧ್ಯ ವಸ್ತುವಾಗಿ ಮಾಡಿಕೊಂಡು ಅದನ್ನೇ ತನ್ನ ಪ್ರಭುವಾಗಿ ಮಾಡಿಕೊಂಡು ವಿನಾಶದ ಹೊಂಡದ ಕಡೆಗೆ ಮನುಷ್ಯನು ಸಾಗುತ್ತಿದ್ದಾನೆ. ಮಾತ್ರವಲ್ಲ ಅವನು ಅದರ ಸಮೀಪಕ್ಕೆ ತಲಪಿದ್ದಾನೆ.

ಮುಸ್ಲಿಮರ ಬಗ್ಗೆ ಆಶ್ಚರ್ಯವಾಗುತ್ತದೆ. ಅವರ ಬಳಿ ಒಂದು ಸಮಗ್ರ ಮತ್ತು ಪರಿಪೂರ್ಣ ಗ್ರಂಥ ತನ್ನ ಮೂಲ ರೂಪದಲ್ಲಿಯೇ ಇದೆ. ಅನಂತರ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಈ ಕಾಲಘಟ್ಟದ ಇಮಾಮರನ್ನು ಕಳುಹಿಸಿರುವನು. ಅವರು ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ಸುಧಾರಣೆ ಮಾಡುವವರಾಗಿದ್ದಾರೆ. ಆದರೆ ಮುಸ್ಲಿಮರು ಅಲ್ಲಾಹನು ನಿಯೋಜಿಸಿದವರ ಉಪದೇಶಗಳನ್ನು ಆಲಿಸಿ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸುವ ಕಡೆಗೆ ಗಮನಿಸುವುದಕ್ಕೆ ಬದಲಾಗಿ ಮುಸ್ಲಿಮರಲ್ಲಿ ಬಹುತೇಕ ಜನರು ಧರ್ಮದ ಹೆಸರಲ್ಲಿ ಗಲಬೆಗೊಂದಲಗಳನ್ನು ಸೃಷ್ಟಿಸುವ ಮತಪಂಡಿತರನ್ನು ಹಿಂಬಾಲಿಸುತ್ತಾ ಇದ್ದಾರೆ. ಅಲ್ಲಾಹನು ಲೋಕದಲ್ಲಿ ಗಲಬೆಗೊಂದಲಗಳನ್ನು ಕೊನೆಗೊಳಿಸಲು, ಮುಸ್ಲಿಮರು ಪರಸ್ಪರ ಪ್ರೀತಿ ಮತ್ತು ಭ್ರಾತೃಭಾವದಿಂದ ವರ್ತಿಸುವಂತೆ ಮಾಡಲು ಮತ್ತು ಅಲ್ಲಾಹನ ಸಾಮೀಪ್ಯ ಗಳಿಸುವಂತೆ ಮಾಡಲು ಒಂದು ವ್ಯವಸ್ಥೆಯನ್ನು ರೂಪಿಸಿದ್ದಾನೆ. ಆದರೆ ಮುಸ್ಲಿಮರು ಅದರ ಕಡೆಗೆ ಲಕ್ಷ್ಯ ನೀಡಲು ಸಿದ್ಧರಾಗಿಲ್ಲ. ಇದೇ ಕಾರಣದಿಂದ ಲೋಕದಲ್ಲಿ ಈಗ ಅವರು ಗಲಬೆಗೊಂದಲಗಳಿಗೆ ಬಲಿಪಶುವಾಗುತ್ತಿದ್ದಾರೆ. ಅವರ ಧಾರ್ಮಿಕ ಮತ್ತು ಲೌಕಿಕ ನಾಯಕರು ಅವರನ್ನು ಅಂಧಕಾರದೊಳಗೆ ನೂಕುತ್ತಿದ್ದಾರೆ. ಒಂದೇ ದೇಶದ ನಿವಾಸಿಗಳಾದ ನಾಗರಿಕರು ಒಬ್ಬರಿನ್ನೊಬ್ಬರ ರಕ್ತಹೀರುವ ದಾಹವನ್ನು ಹೊಂದಿದ್ದಾರೆ. ಈ ಪರಿಸ್ಥಿತಿಯ ಲಾಭ ಪಡೆಯಲು ಮುಸ್ಲಿಮೇತರ ಶಕ್ತಿಗಳು ಮುಸ್ಲಿಮರ ಗುಂಪುಗಳು ಪರಸ್ಪರ ಹೋರಾಡುವಂತೆ ಮಾಡಲು ಮತ್ತು ತಮ್ಮ ಸ್ವಾರ್ಥ ಲಾಭಗಳನ್ನು ಗಳಿಸಲು ಯುದ್ಧದ ಸರಕು ಸರಂಜಾಮುಗಳನ್ನು ಸಹ ನೀಡುತ್ತಿದ್ದಾರೆ ಮತ್ತು ಸೈನಿಕ ಸಹಾಯ ಸಹ ನೀಡುತ್ತಿದ್ದಾರೆ. ಇದು ಬಹಳ ದೊಡ್ಡ ದುಃಖದಾಯಕ ವಿಷಯವಾಗಿದೆ. ಈ ಪರಿಸ್ಥಿತಿ ನಾವು ನಮಗೋಸ್ಕರ ಮತ್ತು ಮುಸ್ಲಿಮ್ ಜನತೆಗೋಸ್ಕರ ಪ್ರಾರ್ಥಿಸಲು ನಮ್ಮ ಗಮನ ಹರಿಸುವಂತಹದಾಗಬೇಕಲ್ಲದೆ ನಾವು ನಮ್ಮ ಕರ್ಮಗಳನ್ನು ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಗೆ ನೋಡಲು ಬಯಸಿದ್ದರೋ ಆ ರೀತಿ ಮಾಡಲು ಪ್ರೇರೇಪಿಸುವಂತಿರಬೇಕು. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಕರ್ಮದ ಸ್ಥಿತಿ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಹೇಗೆ ನೋಡಲು ಬಯಸಿದ್ದರೋ ಆ ರೀತಿ ನಮ್ಮ ಸ್ಥಿತಿ ಇಲ್ಲವಾದರೆ ನಾವು ಸಹ ಗಲಬೆ ಗೊಂದಲ ಅಸ್ತವ್ಯಸ್ತತೆಗೆ ಪಾತ್ರರಾದ ಗುಂಪುಗಳೊಂದಿಗೆ ಸೇರುವುದು ಸಾಧ್ಯವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿರಂತರವಾಗಿ ಮತ್ತು ಪದೇ ಪದೇ ತನ್ನ ಜಮಾಅತಿನ ಜನರಿಗೆ ಉಪದೇಶಿಸುತ್ತಾ ಇದ್ದರು ಬೈಅತ್ ಮಾಡಿದ ನಂತರ ನಿಮ್ಮ ಸ್ಥಿತಿ ಹೇಗಿರಬೇಕು ಎಂದು. ಈ ವಿಷಯಕ್ಕೆ ಸಂಬಂಧಿಸಿ ಕೆಲವು ಉದ್ಧರಣಿಗಳನ್ನು ನಾನು ಈಗ ನಿಮ್ಮ ಮುಂದೆ ಇರಿಸುವೆನು. ಆದುದರಿಂದ ಅವುಗಳನ್ನು ನೀವು ಲಕ್ಷ್ಯವಿಟ್ಟು ಆಲಿಸಬೇಕು. ನಾವು ಇವುಗಳನ್ನು ಮೊದಲು ಅನೇಕ ಸಾರಿ ಆಲಿಸಿದ್ದೇವೆ ಅಥವಾ ಓದಿದ್ದೇವೆ ಎಂದು ನೀವು ಭಾವಿಸಬಾರದು. ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮ್ ಜಮಾಅತ್‌ನೊಂದಿಗೆ ಜಮಾಅತಿನ ಜನರು ತಮ್ಮ ಸ್ಥಿತಿಯನ್ನು ಉತ್ತಮಪಡಿಸಲು ಪದೇ ಪದೇ ಉಪದೇಶಿಸಿರುವುದು ಸೂಚಿಸುವುದೇನೆಂದರೆ ಅವರಿಗೆ ತಮ್ಮ ಜಮಾಅತ್ ಬಗ್ಗೆ ಎಷ್ಟು ಚಿಂತೆ ಇತ್ತೆಂದು. ಜಮಾಅತಿನ ಜನರು ತಮ್ಮ ಉದ್ದೇಶಲಕ್ಷ್ಯಗಳನ್ನು ಮರೆತುಬಿಡಬಾರದು. ಬೈಅತ್ ನಂತರ ಅವರು ಬಿಗಡಾಯಿಸಬಾರದು ಮತ್ತು ಅಂಧಕಾರದ ಕಡೆಗೆ ಸಾಗಲು ಪ್ರಾರಂಭಿಸದಿರಲಿ ಎಂದು ಅವರು ಆಶಿಸಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರತಿಯೊಂದು ಕಡೆಯಲ್ಲಿಯೂ ಭ್ರಷ್ಟತೆ, ನಿರ್ಲಕ್ಷ್ಯತೆ, ಪಥಭ್ರಷ್ಟತೆ ಜಾರಿಯಲ್ಲಿರುವ ಇಂದಿನ ಭ್ರಷ್ಟ ಕಾಲಘಟ್ಟದಲ್ಲಿ ನಮ್ಮ ಜಮಾಅತಿಗೆ ಆವಶ್ಯಕವಾಗಿರುವುದು ತಖ್ವವನ್ನು ಮೈಗೂಡಿಸುವುದಾಗಿದೆ. ಲೋಕದ ಸ್ಥಿತಿ ಹೇಗಿದೆ ಎಂದರೆ ಅಲ್ಲಾಹನ ಆಜ್ಞೆಗಳ ಬಗ್ಗೆ ಗೌರವ ಭಾವನೆ ಇಲ್ಲ. ಹಕ್ಕುಗಳ ಬಗ್ಗೆ ಮತ್ತು ವಸಿಯ್ಯತ್‌ಗಳ ಬಗ್ಗೆ ನಿರ್ಲಕ್ಷ್ಯತೆ ಇದೆ. ನಾವು ಈಡೇರಿಸಬೇಕಾದ ಹಕ್ಕುಗಳು ಯಾವುವು ಅವುಗಳನ್ನು ಈಡೇರಿಸುವುದು ಹೇಗೆ ಎಂಬುದರ ಬಗ್ಗೆ ಚಿಂತೆ ಇಲ್ಲ. ಉಪದೇಶಗಳ ಬಗ್ಗೆ ಸಹ ನಿರ್ಲಕ್ಷ್ಯತೆ ಇದೆ. ಲೌಕಿಕ ಕೆಲಸಗಳ ಬಗ್ಗೆ ಮಿತಿಮೀರಿದ ಆಸಕ್ತಿ ಇದೆ. ಸ್ವಲ್ಪ ಮಾತ್ರ ಲೌಕಿಕ ನಷ್ಟವನ್ನು ನೋಡಿ ಧರ್ಮದ ಭಾಗವನ್ನು ತ್ಯಜಿಸುತ್ತಾರೆ. ಅಲ್ಲಾಹನಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ತ್ಯಜಿಸಿಬಿಡುತ್ತಾರೆ. ಪರಸ್ಪರ ದುರಾಶೆಯ ಸಂಕಲ್ಪದೊಂದಿಗೆ ಒಬ್ಬರನ್ನೊಬ್ಬರು ಕಾಣುತ್ತಾರೆ. ಇಂದ್ರಿಯಾಸಕ್ತಿಗಳಿಗೆ ಸಂಬಂಧಿಸಿ ಬಹಳ ಬಲಹೀನರಾಗುತ್ತಾರೆ. ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಉತ್ತೇಜಿತರಾಗುತ್ತಾರೆ. ಅವರು ಬಲಹೀನರಾಗಿರುವ ತನಕ ಪಾಪಕೃತ್ಯ ಮಾಡಲು ಧೈರ್ಯ ಹೊಂದುವುದಿಲ್ಲ. ಸ್ವಲ್ಪ ಮಾತ್ರ ಬಲಹೀನತೆ ನೀಗಿದಾಗ, ಪಾಪಕೃತ್ಯ ಮಾಡಲು ಸಂದರ್ಭ ದೊರಕಿದಾಗ ತಕ್ಷಣ ಪಾಪಕೃತ್ಯ ಮಾಡುತ್ತಾರೆ. ಇಂದಿನ ಕಾಲದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಹುಡುಕಿದರೆ ನೀವು ತಿಳಿದುಕೊಳ್ಳುವಿರಿ ಸತ್ಯವಾದ ತಖ್ವ ಕಣ್ಮರೆಯಾಗಿದೆ ಮತ್ತು ಸತ್ಯವಾದ ವಿಶ್ವಾಸ ಸಂಪೂರ್ಣವಾಗಿ ನಶಿಸಿದೆ ಎಂದು. ಆದರೆ ಸತ್ಯವಾದ ತಖ್ವ ಮತ್ತು ಸತ್ಯವಾದ ವಿಶ್ವಾಸ ನಾಶವಾಗಬಾರದು ಎಂದು ಅಲ್ಲಾಹನು ನಿರ್ಧರಿಸಿರುತ್ತಾನೆ. ಬೆಳೆ ಸಂಪೂರ್ಣ ನಾಶವಾಗಲಿದೆ ಎಂದು ಕಾಣುವಾಗ ಅಲ್ಲಾಹನು ಪುನಃ ಬೆಳೆ ಸೃಷ್ಟಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ಮೂಲ ರೂಪದಲ್ಲಿ ಈಗಲೂ ಬಾಕಿಯಾಗಿ ಉಳಿದಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: **ಇನ್ನಾ ನಹ್‌ನು ನಝ್ಝಲ್‌ನದ್ದಿಕ್ರ ವ ಇನ್ನಾ ಲಹು ಲ ಹಾಫಿಝೂನ್** ನಾವೇ ಈ ಖುರ್‌ಆನನ್ನು ಅವತೀರ್ಣಗೊಳಿಸಿದೆವು. ನಾವೇ ಅದನ್ನು ಸಂರಕ್ಷಿಸುವೆವು ಎಂದು. ಹದೀಸುಗಳ ಬಹಳ ಭಾಗ ಸಹ ಅಸ್ತಿತ್ವದಲ್ಲಿದೆ. ಅಲ್ಲಾಹನ ಅನುಗ್ರಹಗಳು ಸಹ ಇವೆ. ಆದರೆ ಹೃದಯಗಳಲ್ಲಿ ಈಮಾನ್ ಆಗಲಿ ಅನುಷ್ಠಾನ ಕರ್ಮಗಳಾಗಲಿ ಇಲ್ಲವೇ ಇಲ್ಲ. ಇವುಗಳನ್ನು ಪುನಃ ಹುಟ್ಟಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ನಿಯೋಜಿಸಿದ್ದಾನೆ. ಅಲ್ಲಾಹನ ಅಸ್ತಿತ್ವ ಆವಶ್ಯಪಡುವುದೇನೆಂದರೆ ಇವುಗಳು ಬರಿದಾಗಬಾರದೆಂದು. ಕೆಡುಕುಗಳು ಹಬ್ಬುವಾಗ ಅಲ್ಲಾಹನ ದೇವತ್ವವು ಆವಶ್ಯಪಡುವುದೇನೆಂದರೆ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಜನರಿಂದ ಈ ಲೋಕವನ್ನು ತುಂಬಿಸಬೇಕೆಂದು. ಅವರು ಧರ್ಮವನ್ನು ಜಾರಿಗೊಳಿಸುವವರೂ ಧರ್ಮವನ್ನು ಹಬ್ಬಿಸುವವರೂ ಆಗಬೇಕು. ಧರ್ಮವನ್ನು ಅನುಷ್ಠಾನಕ್ಕೆ ತರುವವರಾಗಬೇಕು. ಆದುದರಿಂದಲೇ ನಾವು ತಖ್ವ ಭರಿತ ಜೀವಿತ ಲಭಿಸಬೇಕೆಂದು ತಬ್‌ಲೀಗ್ ಮಾಡುತ್ತೇವೆ.

ಸರಿಯಾಗಿ ಬೈಅತ್ ಮಾಡಿದ್ದರೆ ಜೀವಂತವಾಗಿರುವವರೊಂದಿಗೆ ಸೇರುವುದು ಆವಶ್ಯಕವಾಗಿದೆ. ಆಧ್ಯಾತ್ಮಿಕವಾಗಿ ಜೀವಂತವಾಗಿರುವವರೊಂದಿಗೆ ಸೇರಬೇಕು. ಹಾಗೆ ಮಾಡದಿದ್ದರೆ ಬೈಅತ್‌ನಿಂದ ಯಾವ ಪ್ರಯೋಜನವೂ ದೊರಕಲಾರದು. ಇಸ್ಲಾಮಿನ ವಾಸ್ತವಿಕ ರೂಪವೇನು, ಅದನ್ನು ನಾವು ಹೇಗೆ ತಾನೆ ಮೈಗೂಡಿಸಬಹುದು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಇಸ್ಲಾಮ್ ಎಂದರೆ ಅಲ್ಲಾಹನ ಎಲ್ಲಾ ಆಜ್ಞೆಗಳಿಗೆ ಅಧೀನವಾಗುವುದರ ಹೆಸರಾಗಿದೆ. ಅದರ ಸಂಕ್ಷಿಪ್ತ ರೂಪ ಅಲ್ಲಾಹನನ್ನು ಸತ್ಯವಾಗಿ ಹಾಗೂ ಸಂಪೂರ್ಣವಾದ ರೀತಿಯಲ್ಲಿ ಅನುಸರಿಸುವುದಾಗಿದೆ. ತನ್ನ ಸಂಪೂರ್ಣ ಅಸ್ತಿತ್ವವನ್ನು ಅಲ್ಲಾಹನ ಮುಂದೆ ಅರ್ಪಿಸುವವನೇ ಮುಸ್ಲಿಮನಾಗಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ಮನ್ ಅಸ್‌ಲಮ ವಜ್‌ಹಹು ಲಿಲ್ಲಾಹಿ ವಹುವ ಮುಹ್‌ಸಿನುನ್.** ತನ್ನ ಪೂರ್ಣ ಅಸ್ತಿತ್ವವನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಅರ್ಪಿಸುವವನೇ ಮುಸ್ಲಿಮನಾಗಿದ್ದಾನೆ. ಅವನ ನಂಬಿಕೆಗಳ ಮತ್ತು ಕರ್ಮಗಳ ಉದ್ದೇಶಲಕ್ಷ್ಯ ಅಲ್ಲಾಹನ ಪ್ರೀತಿಯನ್ನು ಗಳಿಸುವುದಾಗಿರಬೇಕು. ಅವನು ಮಾಡುವ ಎಲ್ಲಾ ಸತ್ಕರ್ಮಗಳು ಮತ್ತು ಒಳಿತುಗಳು ಕಷ್ಟಪಟ್ಟು ಮಾಡುವ ರೀತಿಯಲ್ಲಿರಬಾರದು. ಅವುಗಳಿಂದ ಒಂದು ರಸಾನುಭೂತಿ ಗಳಿಸಲು ಪ್ರಯತ್ನ ಮಾಡಬೇಕು. ನೈಜ ಮುಸ್ಲಿಮನೊಂದಿಗೆ ನಿನ್ನ ಕರ್ಮಗಳಿಗೆ ಪ್ರತಿಫಲವಾಗಿ ಏನೂ ದೊರಕಲಾರದು ಎಂದು ಹೇಳುವುದಾದರೆ ಅವನು ತನ್ನ ಸತ್ಕರ್ಮಗಳನ್ನು ಮತ್ತು ತನಗೆ ಅಲ್ಲಾಹನೊಂದಿಗಿರುವ ಪ್ರೇಮವನ್ನು ಖಂಡಿತವಾಗಿಯೂ ತ್ಯಜಿಸಲಾರನು.

ಅಲ್ಲಾಹನೊಂದಿಗೆ ನಿಸ್ವಾರ್ಥ ಪ್ರೇಮವನ್ನು ನಮ್ಮಲ್ಲಿ ಸೃಷ್ಟಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಚ್ಛಿಸುತ್ತಾರೆ. ಅಲ್ಲಾಹನಿಂದ ಏನೂ ದೊರಕದಿದ್ದರೂ ಸಹ ಅಲ್ಲಾಹನನ್ನು ಪ್ರೀತಿಸಬೇಕು. ಅಲ್ಲಾಹನನ್ನು ಆರಾಧನೆ ಮಾಡುವುದು, ಅವನೊಂದಿಗೆ ಸಂಬಂಧ ಸ್ಥಾಪಿಸುವುದು, ಅವನನ್ನು ಅನುಸರಿಸುವುದರಲ್ಲಿ ತಲ್ಲೀನನಾಗುವುದು ಯಾವುದೇ ಪ್ರತಿಫಲವನ್ನು ಪ್ರತೀಕ್ಷಿಸುತ್ತಾ ಅಲ್ಲ. ಬದಲಾಗಿ ನೈಜ ಮುಸ್ಲಿಮನು ತನ್ನನ್ನು ಅಲ್ಲಾಹನ ಸೃಷ್ಟಿ ಎಂದು ಮನವರಿಕೆ ಮಾಡಿಕೊಂಡು ಅಲ್ಲಾಹನನ್ನು ಪ್ರೀತಿಸಲು ಮತ್ತು ಅನುಸರಿಸಲು ತನ್ನನ್ನು ಸೃಷ್ಟಿಸಲಾಗಿದೆ ಮತ್ತು ಬೇರೆ ಯಾವ ಉದ್ದೇಶಲಕ್ಷ್ಯವೂ ಇಲ್ಲ ಎಂದು ಯೋಚಿಸುತ್ತಾನೆ. ಆದುದರಿಂದ ನೈಜ ಮುಸ್ಲಿಮನು ತನಗೆ ಅಲ್ಲಾಹನು ದಯಪಾಲಿಸಿದ ಶಕ್ತಿಸಾಮರ್ಥ್ಯಗಳನ್ನು ಈ ಉದ್ದೇಶಲಕ್ಷ್ಯಗಳಿಗೋಸ್ಕರ ವಿನಿಯೋಗಿಸುವಾಗ ಅವನಿಗೆ ತನ್ನ

ಪ್ರೀತಿಗೆ ವಾಸ್ತವಿಕವಾಗಿ ಪಾತ್ರನಾಗುವ ಅಲ್ಲಾಹನ ಮುಖಾರವಿಂದದ ದರ್ಶನ ಲಭಿಸುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಅಲ್ಲಾಹನ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುವುದು, ಕೇವಲ ಅವನ ಸಂಪ್ರೀತಿ ಗಳಿಸಲು ಪ್ರಯತ್ನಿಸುವುದು ಸುಲಭವಾದ ಕೆಲಸವೇನೂ ಅಲ್ಲ. ಅದಕ್ಕೋಸ್ಕರ ಧಾರಾಳ ಪ್ರಯತ್ನ ಮಾಡಬೇಕಾಗಿದೆ. ಆಗ ಮಾತ್ರ ಅಹ್ಮದಿಯಾಗಿರುವ ಉದ್ದೇಶಲಕ್ಷ್ಯವು ಲಭಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ಯಾರು ಪೂರ್ಣವಾಗಿ ಅನುಸರಣೆ ತೋರಿಸುವುದಿಲ್ಲವೋ ಅವನು ಈ ಜಮಾಅತನ್ನು ಅಪಕೀರ್ತಿಗೆ ಗುರಿಪಡಿಸುತ್ತಾನೆ. ಆಜ್ಞೆ ಒಂದು ಮಾತ್ರವಲ್ಲ ಅನೇಕ ಆಜ್ಞೆಗಳಿವೆ. ಸ್ವರ್ಗಕ್ಕೆ ಅನೇಕ ಬಾಗಿಲುಗಳಿರುವಂತೆ. ಒಬ್ಬನು ಯಾವುದಾದರೊಂದು ಬಾಗಿಲಿನ ಮೂಲಕ ಪ್ರವೇಶಿಸುತ್ತಾನೆ. ಇನ್ನೊಬ್ಬನು ಮತ್ತೊಂದು ಬಾಗಿಲಿನ ಮೂಲಕ ಪ್ರವೇಶಿಸುತ್ತಾನೆ. ಅದೇ ರೀತಿ ನರಕಕ್ಕೆ ಸಹ ಅನೇಕ ಬಾಗಿಲುಗಳಿವೆ. ನೀವು ಅದರ ಒಂದು ಬಾಗಿಲನ್ನು ಮುಚ್ಚಿ ಇನ್ನೊಂದನ್ನು ತೆರೆದಿಡುವವರಾಗಬಾರದು. ನೆನಪಿಟ್ಟುಕೊಳ್ಳಿರಿ, ಕೇವಲ ಹೆಸರನ್ನು ನೋಂದಾಯಿಸುವುದರಿಂದ ನೀವು ಜಮಾಅತಿನಲ್ಲಿ ಸೇರುವವರಾಗಲಾರಿರಿ. ಪರಸ್ಪರ ಪ್ರೀತಿಸಿರಿ. ಹಕ್ಕುಗಳನ್ನು ಧ್ವಂಸ ಮಾಡಬೇಡಿರಿ. ಅಲ್ಲಾಹನ ಮಾರ್ಗದಲ್ಲಿ ಉನ್ಮತ್ತರ ಹಾಗೆ ಆಗಿರಿ. ಆ ಮೂಲಕ ಅಲ್ಲಾಹನು ನಿಮಗೆ ಅನುಗ್ರಹ ನೀಡುವವನಾಗಲಿ.

ಒಂದು ಸಂದರ್ಭದಲ್ಲಿ ಜಮಾಅತಿಗೆ ತಖ್ವದ ಪ್ರಾಮುಖ್ಯತೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅಲ್ಲಾಹನು ನಮ್ಮನ್ನು ನಿಯೋಜಿಸಿರುವುದು ತಖ್ವದ ಮೈದಾನ ಖಾಲಿಯಾಗಿರುವುದರಿಂದಾಗಿದೆ. ಧರ್ಮವನ್ನು ಪ್ರಚಾರ ಮಾಡಬೇಕಾಗಿದೆ. ಜನರಿಗೆ ತರಬೇತಿ ನೀಡಬೇಕಾಗಿದೆ. ತಖ್ವವನ್ನು ಮೊದಲು ನಿಮ್ಮೊಳಗೆ ಹುಟ್ಟಿಸಬೇಕಾಗಿದೆ. ತಖ್ವವನ್ನು ಹೊಂದಿದರೆ ಎಲ್ಲಾ ಕೆಲಸಗಳು ಮೆಲ್ಲಮೆಲ್ಲಗೆ ಪ್ರಾರಂಭವಾಗುವುವು. ನೀವು ತಖ್ವವನ್ನು ಹೊಂದಿರುವವರಾದರೆ ಇಡೀ ಲೋಕ ನಿಮ್ಮ ಜೊತೆಗಿರುವುದು. ಆದುದರಿಂದ ತಖ್ವವನ್ನು ನಿಮ್ಮಲ್ಲಿ ಸೃಷ್ಟಿಸಿರಿ. ಮದ್ಯಪಾನ ಮಾಡುವವರಿಗೆ ಅಥವಾ ಮದ್ಯವು ಧರ್ಮದ ಒಂದು ಮುಖ್ಯ ಭಾಗವಾಗಿರುವವರಿಗೆ ತಖ್ವದೊಂದಿಗೆ ಯಾವುದೇ ಸಂಬಂಧವಿರಲಾರದು. ಅಂತಹ ಜನರು ಒಳಿತಿನ ವಿರುದ್ಧ ಯುದ್ಧ ಮಾಡುವವರಾಗಿದ್ದಾರೆ. ನಮ್ಮ ಜಮಾಅತ್ ಕೆಡುಕಿನ ವಿರುದ್ಧ ಯುದ್ಧ ಮಾಡುವ, ತಖ್ವ ಮತ್ತು ಪರಿಶುದ್ಧಿಯ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುವ ಭಾಗ್ಯವನ್ನು ಅಲ್ಲಾಹನು ನೀಡುವುದಾದರೆ ಅದುವೇ ಬಹಳ ದೊಡ್ಡ ವಿಜಯವಾಗಿದೆ. ಅದಕ್ಕಿಂತಲೂ ಬೇರೆ ಯಾವುದೂ ಪ್ರಭಾವಶಾಲಿಯಾಗಲಾರದು. ನೀವು ಲೋಕದ ಧರ್ಮಗಳ ಕಡೆಗೆ ನೋಡಿರಿ. ಮುಖ್ಯ ಉದ್ದೇಶವಾದ ತಖ್ವ ಅದರಲ್ಲಿ ಕಣ್ಮರೆಯಾಗಿದೆ. ಲೌಕಿಕ ಆಡಂಬರಗಳನ್ನು ಅವರು ದೇವನನ್ನಾಗಿ ಮಾಡಿಕೊಂಡಿದ್ದಾರೆ. ವಾಸ್ತವಿಕ ದೇವ ಮರೆಯಾಗಿರುವನು. ನೈಜ ದೇವನನ್ನು ಅಪಮಾನಿಸಲಾಗುತ್ತಿದೆ. ಆದರೆ ಈಗ ಅಲ್ಲಾಹನು ಇಚ್ಛಿಸುವುದೇನೆಂದರೆ ಲೋಕಕ್ಕೆ ಅವನ ಬಗ್ಗೆ ವಾಸ್ತವಿಕ ಜ್ಞಾನ ಲಭಿಸಲಿ ಎಂದು. ಲೋಕವನ್ನು ತಮ್ಮ ದೇವನಾಗಿ ಮಾಡಿಕೊಂಡವರಿಗೆ ನೈಜ ದೇವನ ಬಗ್ಗೆ ಭರವಸೆ ಇರಲಾರದು.

ಆದುದರಿಂದ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು, ಅಲ್ಲಾಹನ ಹಕ್ಕುಗಳನ್ನು ಈಡೇರಿಸಿಕೊಡುವುದಕ್ಕೆ ಬದಲಾಗಿ ನಾವು ಲೌಕಿಕ ಉದ್ದೇಶಲಕ್ಷ್ಯಗಳನ್ನು ಗಳಿಸಲು ಪ್ರಯತ್ನ ಮಾಡುತ್ತಿದ್ದೇವೆಯೇ ಎಂದು. ಅಲ್ಲಾಹನ ಹಕ್ಕುಗಳನ್ನು ಈಡೇರಿಸಿಕೊಡುವುದಾದರೆ ಧರ್ಮಕ್ಕೆ ಆದ್ಯತೆ ನೀಡಬೇಕಾಗಿದೆ. ಲೌಕಿಕ ಉದ್ದೇಶಲಕ್ಷ್ಯಗಳನ್ನು ಹಿಂಭಾಗಕ್ಕೆ ಹಾಕಬೇಕು. ನಾವು ಧರ್ಮಕ್ಕೆ ಆದ್ಯತೆ ನೀಡುತ್ತಿದ್ದೇವೆಯೇ ಅಥವಾ ಲೌಕಿಕ ಕಾರ್ಯಗಳು ನಮ್ಮ ಧಾರ್ಮಿಕ ಕಾರ್ಯಗಳ ಮೇಲೆ ಜಯಗಳಿಸುತ್ತಿವೆಯೋ ಎಂದು ನೋಡಬೇಕು. ತಖ್ವದಲ್ಲಿ ನಾವು ಅಭಿವೃದ್ಧಿ ಹೊಂದುತ್ತಿದ್ದೇವೆಯೇ ಅಥವಾ ತಖ್ವದಲ್ಲಿ ಕೊರತೆ ಉಂಟಾಗುತ್ತಿದೆಯೇ ಎಂದು ಸಹ ಪರಿಶೋಧಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಾತ್ವಿಕನಾದವನ ಕಡ್ಡಾಯ ಕರ್ತವ್ಯವೇನೆಂದರೆ ಅವನು ಧಾರ್ಮಿಕ ವಿಷಯಗಳ ಅನ್ವೇಷಣೆಯಲ್ಲಿ ಮಗ್ನನಾಗಿರಬೇಕು. ನಮ್ಮ ಪೈಗಂಬರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಉನ್ನತ ಪದವಿ ಗಳಿಸಿದ ಬೇರೆ ಯಾವುದೇ ಪರಿಪೂರ್ಣ ವ್ಯಕ್ತಿ ಲೋಕದಲ್ಲಿ ಜೀವಿಸಿರಲಿಲ್ಲ. ಅವರೊಂದಿಗೆ ಸಹ ಅಲ್ಲಾಹನು ಹೇಳಿದನು: **ರಬ್ಬಿ ಝಿದ್‌ನೀ ಇಲ್‌ಮ.** ಓ ನನ್ನ ಪ್ರಭು ನನ್ನ ಜ್ಞಾನವನ್ನು ವರ್ಧಿಸು ಎಂದು ಪ್ರಾರ್ಥಿಸಬೇಕೆಂದು. ಹೀಗಿರುವಾಗ ತನ್ನ ಜ್ಞಾನದ ಬಗ್ಗೆ ಪರಿಪೂರ್ಣ ಭರವಸೆ ಹೊಂದಿ ನಿಂತುಬಿಡಲು ಮತ್ತು ಮುಂದೆ ಅಭಿವೃದ್ಧಿ ಗಳಿಸುವ ಆವಶ್ಯಕತೆ ಇಲ್ಲ ಎಂದು ಭಾವಿಸಲು ಇತರ ಯಾರಿಗೆ ತಾನೆ ಸಾಧ್ಯವಿದೆ? ಮನುಷ್ಯನು ತನ್ನ ವಿದ್ಯೆ ಮತ್ತು ಜ್ಞಾನದಲ್ಲಿ ಅಭಿವೃದ್ಧಿ ಗಳಿಸುತ್ತಾ ಇರುವಾಗ ಅವನಿಗೆ ತಿಳಿಯುವುದು, ನಾನು ಕಲಿಯಲಿಕ್ಕಿರುವ ಅನೇಕ ವಿಷಯಗಳು ಇನ್ನೂ ಬಾಕಿಯಾಗಿ ಉಳಿದಿವೆ ಎಂದು.

ನೀವು ಅನೇಕ ಅನಾವಶ್ಯಕ ವಿಷಯಗಳನ್ನು ಬಿಟ್ಟು ಈ ಜಮಾಅತಿಗೆ ಪ್ರವೇಶಿಸಿರುವಿರಿ. ಆದರೆ ನೀವು ಜಮಾಅತಿನ ಬಗ್ಗೆ ಪರಿಪೂರ್ಣ ಜ್ಞಾನ ಗಳಿಸದಿದ್ದರೆ ನಿಮಗೆ ಸಿಗುವ ಪ್ರಯೋಜನವಾದರೂ ಏನು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೊದಲು ಪವಿತ್ರ ಖುರ್‌ಆನ್ ಬಗ್ಗೆ ಚಿಂತಿಸಲು ಉಪದೇಶಿಸಿರುವರು. ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುತ್ತಾ ಧಾರ್ಮಿಕ ಜ್ಞಾನದಲ್ಲಿ ಅಭಿವೃದ್ಧಿ ಗಳಿಸಲು ನಾವು ಪ್ರಯತ್ನ ಮಾಡಬೇಕಾಗಿದೆ. ಖಿಲಾಫತ್‌ನೊಂದಿಗೆ ಸಂಬಂಧವನ್ನು ಬೆಳೆಸಲು ನೋಡಬೇಕಾಗಿದೆ. ಅಲ್ಲಾಹನು ನಮಗೆ ಇದಕ್ಕೋಸ್ಕರ **ಎಂ.ಟಿ.ಎ.** ಎಂಬ ಅನುಗ್ರಹ ನೀಡಿದ್ದಾನೆ. ಅದರ ಮೂಲಕ ಜಮಾಅತಿನೊಂದಿಗೆ ಸಂಬಂಧ ಜೋಡಿಸಬೇಕಾಗಿದೆ. ಆಯಾಕಾಲದ ಖಲೀಫರ ಎಲ್ಲಾ ಕಾರ್ಯಕ್ರಮಗಳನ್ನು ನೋಡಿ

ಲಾಭ ಪಡೆಯಲು ಪ್ರಯತ್ನಿಸಬೇಕು. ಇದರ ಸದುಪಯೋಗವನ್ನು ಪ್ರತಿಯೊಬ್ಬ ಅಹ್ಮದಿ ಪಡೆಯಬೇಕು. ಪರಸ್ಪರ ಪ್ರೀತಿಸಬೇಕು.

ಒಬ್ಬರಿನ್ನೊಬ್ಬರ ಕಷ್ಟಗಳನ್ನು ಮನವರಿಕೆ ಮಾಡಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವಾಸ್ತವಿಕವಾಗಿ ಜಮಾಅತಿನ ಎಲ್ಲರೂ ಒಂದೇ ಮಟ್ಟದವರಾಗಿರುವುದಿಲ್ಲ. ಆದುದರಿಂದ ಬಲಹೀನ ಸಹೋದರರಿಗೆ ನೆರವು ನೀಡಬೇಕು. ಅವರಿಗೆ ಶಕ್ತಿ ನೀಡಬೇಕೆಂಬ ನಿಯಮವಿರಬೇಕು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದ್ದಾನೆ: **ವ ತಆವನೂ ಅಲಲ್‌ಬಿರ್ರಿ ವತ್ತಖ್ವಾ.** ಒಳಿತು ಮತ್ತು ತಖ್ವಕ್ಕೆ ಸಂಬಂಧಿಸಿ ಒಬ್ಬರಿನ್ನೊಬ್ಬರಿಗೆ ನೆರವು ನೀಡಿರಿ. ಆದುದರಿಂದ ನೀವು ಬಲಹೀನ ಸಹೋದರರ ಭಾರವನ್ನು ಹೊತ್ತುಕೊಳ್ಳಿರಿ. ಕರ್ಮ, ವಿಶ್ವಾಸ, ಮತ್ತು ಸಂಪತ್ತು ಇವುಗಳಿಗೆ ಸಂಬಂಧಿಸಿದ ಬಲಹೀನತೆಗಳಲ್ಲಿಯೂ ಸಹಭಾಗಿಗಳಾಗಿರಿ. ಬಲಹೀನರಿಗೆ ಶಕ್ತಿಶಾಲಿಗಳು ಸಹಾಯ ನೀಡುವ ತನಕ ಯಾವುದೇ ಜಮಾಅತ್ ಜಮಾಅತ್ ಎಂದು ಗಣಿಸಲ್ಪಡದು. ಬಲಹೀನರ ಬಲಹೀನತೆಯನ್ನು ಮರೆಮಾಡಿಕೊಂಡು ಅದನ್ನು ನಿರ್ವಹಿಸಬೇಕು. ಸಹಾಬರಿಗೆ ನೀಡಲ್ಪಟ್ಟ ಉಪದೇಶ ಅದೇ ಆಗಿತ್ತು. ನವಮುಸ್ಲಿಮರ ಬಲಹೀನತೆಯನ್ನು ನೋಡಿ ಉದ್ರೇಕಿತರಾಗಬೇಡಿರಿ. ಏಕೆಂದರೆ ನಿಮ್ಮವರಲ್ಲಿ ಸಹ ಇಂತಹ ಬಲಹೀನರು ಹಿಂದೆ ಇದ್ದರು. ಒಬ್ಬರಿನ್ನೊಬ್ಬರದ್ದನ್ನು ತಿಂದು ಹಾಕುವವರು ಇದ್ದರೆ ಅದು ಜಮಾಅತ್ ಆಗಲಾರದು. ಅಥವಾ ನಾಲ್ಕು ಜನರು ಕುಳಿತಿರುವಾಗ ತಮ್ಮ ಬಡ ಸಹೋದರನನ್ನು ದೂಷಿಸುವುದಾದರೆ ಅದು ಜಮಾಅತ್ ಆಗಲಾರದು. ಜನರು ಜಮಾಯಿಸುವುದರಲ್ಲಿ ಶಕ್ತಿ ಉಂಟಾಗಬೇಕು. ಐಕ್ಯತೆ ಹುಟ್ಟಬೇಕು. ಹಾಗೆ ಆದರೆ ಪ್ರೀತಿ ಹುಟ್ಟುತ್ತದೆ ಮತ್ತು ಅನುಗ್ರಹ ಲಭಿಸುತ್ತದೆ. ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಕಠಿಣವಾಗಿ ವರ್ತಿಸಬಾರದು. ಅದು ಹೃದಯಕ್ಕೆ ನೋವುಂಟು ಮಾಡುತ್ತದೆ ಮತ್ತು ಅತೃಪ್ತಿಗೆ ಕಾರಣವಾಗುತ್ತದೆ.

ಭ್ರಾತೃಭಾವನೆ ಮತ್ತು ಸಹಾನುಭೂತಿ ಬಗ್ಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಜಮಾಅತಿನವರು ಪರಸ್ಪರ ಸತ್ಯವಾದ ಸಹಾನುಭೂತಿ ತೋರಿಸುವ ತನಕ ನಮ್ಮ ಜಮಾಅತ್ ಹಚ್ಚ ಹಸುರಾಗಿರಲಾರದು. ಯಾರಿಗೆ ಶಕ್ತಿ ನೀಡಲ್ಪಟ್ಟಿದೆಯೋ ಅವನು ಬಲಹೀನರನ್ನು ಪ್ರೀತಿಸಲಿ. ಒಬ್ಬನು ಇನ್ನೊಬ್ಬನ ತಪ್ಪು ಕಂಡಾಗ ಅವನೊಂದಿಗೆ ಸುಸ್ವಭಾವದೊಂದಿಗೆ ವರ್ತಿಸದೆ ದ್ವೇಷದಿಂದಲೂ ಜಿಗುಪ್ಸೆಯಿಂದಲೂ ವರ್ತಿಸುವುದಾಗಿ ನಾನು ಕೇಳಿದ್ದೇನೆ. ಆದರೆ ಅವರು ಮಾಡಬೇಕಾಗಿದ್ದುದು ತಪ್ಪು ಮಾಡಿದವನಿಗೋಸ್ಕರ ಪ್ರಾರ್ಥಿಸುವುದಾಗಿದೆ. ಪ್ರೀತಿಯಿಂದಲೂ ಸುಸ್ವಭಾವದಿಂದಲೂ ತಪ್ಪಿನ ಬಗ್ಗೆ ಮನವರಿಕೆ ಮಾಡಿಕೊಡುವುದಾಗಿದೆ. ಆದರೆ ಅದಕ್ಕೆ ಬದಲಾಗಿ ಹೆಚ್ಚು ಹಗೆತನದಿಂದ ವರ್ತಿಸುವುದು ಕಂಡು ಬರುತ್ತದೆ. ಕ್ಷಮಿಸದಿದ್ದರೆ, ಸಹಾನುಭೂತಿಯಿಂದ ವರ್ತಿಸದಿದ್ದರೆ ಈ ರೀತಿ ಬಿಗಡಾಯಿಸುತ್ತಾ ಕೊನೆಗೆ ಅಂತಿಮ ಸ್ಥಿತಿ ಕೆಟ್ಟದಾಗುವುದು. ಪರಸ್ಪರ ಸಹಾನುಭೂತಿ ತೋರಿಸುವಾಗ, ತಪ್ಪುಗಳನ್ನು ಮರೆಮಾಡುವಾಗ ಎಲ್ಲರೂ ಒಂದು ಜಮಾಅತಿಗೆ ಸೇರಿದವರಾಗುತ್ತಾರೆ. ನನಗೆ ಅಲ್ಲಾಹನ ಬಗ್ಗೆ ಬಹಳ ಭರವಸೆ ಇದೆ. ಅವನು ಹೀಗೆ ವಾಗ್ದಾನ ಮಾಡಿದ್ದಾನೆ: **ಜಾಇಲುಲ್ಲದೀನತ್ತಬಊಕ ಫೌಖಲ್ಲದೀನ ಕಫರೂ ಇಲಾ ಯೌಮಿಲ್ ಖಿಯಾಮ.** ನಿನ್ನನ್ನು ಅನುಸರಿಸುವವರಿಗೆ ನಿನ್ನನ್ನು ನಿರಾಕರಿಸುವವರ ಮೇಲೆ ಖಿಯಾಮತ್ ದಿನದ ತನಕ ಉನ್ನತ ಸ್ಥಾನವನ್ನು ನೀಡುವೆನು.

ಇಂದಿನ ಕಾಲದಲ್ಲಿ, ವಿಶಿಷ್ಟವಾಗಿ ಪಾಕಿಸ್ಥಾನದಲ್ಲಿ, ಅಹ್ಮದಿಯರು ತಮ್ಮ ಸ್ಥಿತಿಯ ಬಗ್ಗೆ ನೋಡಬೇಕಾಗಿದೆ. ಅವರು ಅಲ್ಲಿ ಬಲಹೀನರಾಗಿದ್ದಾರೆ. ಅಲ್ಲಿನ ಸರಕಾರ, ನ್ಯಾಯಾಲಯಗಳು, ಮತ್ತು ಆಡಳಿತ ವ್ಯವಸ್ಥೆ ಅವರ ವಿರುದ್ಧ ಮೊದಲಿಗಿಂತ ಹೆಚ್ಚು ಕ್ರಮಗಳನ್ನು ಜರಗಿಸುತ್ತಿವೆ. ಅಲ್ಲಿರುವ ಅಹ್ಮದಿಯರು ವಿಶಿಷ್ಟವಾಗಿ ತಮ್ಮ ಸ್ಥಿತಿಗಳಲ್ಲಿ ಬದಲಾವಣೆ ಉಂಟುಮಾಡಲು ಪ್ರಯತ್ನ ಮಾಡಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತಾರೆ: ಈಗ ನಿಮ್ಮಲ್ಲಿ ಒಂದು ಹೊಸ ಭ್ರಾತೃತ್ವ ಸ್ಥಾಪಿತವಾಗಿದೆ. ನಿಮ್ಮ ಹಿಂದಿನ ಸಂಬಂಧಗಳು ಮುರಿದು ಹಾಕಲ್ಪಟ್ಟಿವೆ. ಅಲ್ಲಾಹನು ಈ ಹೊಸ ಸಮುದಾಯವನ್ನು ರಚಿಸಿದ್ದಾನೆ. ಇದರಲ್ಲಿ ಶ್ರೀಮಂತರು, ಬಡವರು, ಮಕ್ಕಳು, ಯುವ ಜನರು ಮತ್ತು ವೃದ್ಧರು ಮೊದಲಾದ ಪ್ರತಿಯೊಂದು ರೀತಿಯ ಜನರು ಸೇರಿದ್ದಾರೆ. ಬಡವರು ತಮ್ಮ ಗೌರವಾನ್ವಿತ ಸಹೋದರರನ್ನು ಆದರ ಭಾವದಿಂದ ಕಾಣಬೇಕು. ಐಶ್ವರ್ಯವಂತರು ಬಡವರಿಗೆ ನೆರವು ನೀಡಬೇಕು. ಅವರನ್ನು ಬಡವರೆಂದೂ ಕೀಳು ಎಂದೂ ಗಣಿಸಬಾರದು. **ಕಿಶ್ತಿನೂಹ್** ಗ್ರಂಥವನ್ನು ಪದೇ ಪದೇ ಓದಿರಿ. ಅದರಲ್ಲಿ ವಿವರಿಸಿದ ಪ್ರಕಾರ ನಿಮ್ಮನ್ನು ಅಳವಡಿಸಿಕೊಳ್ಳಿರಿ. ಅಲ್ಲಾಹನು ಹೇಳುತ್ತಾನೆ: **ಖದ್ ಅಫ್‌ಲಹ ಮನ್ ಝಕ್ಕಾಹಾ** ತನ್ನ ಆತ್ಮವನ್ನು ಪರಿಶುದ್ಧಿಗೊಳಿಸಿದವನು ನಿಶ್ಚಯವಾಗಿಯೂ ಜಯಶಾಲಿಯಾದನು. ಕಿಶ್ತಿನೂಹ್ ಗ್ರಂಥದಲ್ಲಿ ನಾನು ನನ್ನ ಉಪದೇಶಗಳನ್ನು ಬರೆದಿದ್ದೇನೆ. ಅವುಗಳ ಬಗ್ಗೆ ಪ್ರತಿಯೊಬ್ಬ ವ್ಯಕ್ತಿ ತಿಳಿದುಕೊಳ್ಳುವುದು ಆವಶ್ಯಕವಾಗಿದೆ. ಪ್ರತಿಯೊಂದು ನಗರದ ಜಮಾಅತ್ ಸಭೆ ಜರುಗಿಸಿ ಎಲ್ಲರಿಗೂ ಓದಿ ಕೇಳಿಸಬೇಕು. ಈ ರೀತಿ ಅದರ ಪ್ರಚಾರ ನಡೆಯುವುದು. ನಾವು ಬಯಸುತ್ತಿರುವ ಐಕ್ಯತೆ ಜಮಾಅತಿನಲ್ಲಿ ಸ್ಥಾಪಿತವಾಗುವುದು.

ಜಮಾಅತಿನಲ್ಲಿ ಓದಿ ಕೇಳಿಸುವ ವ್ಯವಸ್ಥೆ ಮಾಡುವುದರೊಂದಿಗೆ ಎಂ.ಟಿ.ಎ.ದಲ್ಲಿಯೂ ಓದುವ ವ್ಯವಸ್ಥೆ ಆಗಬೇಕು. ಪ್ರತಿಯೊಬ್ಬನು ಆ ಉಪದೇಶಗಳನ್ನು ತನ್ನ ಜೀವಿತದ ಭಾಗವನ್ನಾಗಿ ಮಾಡಬೇಕು. ಅದನ್ನು ಓದಿ ಪ್ರತಿಯೊಬ್ಬನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಕೆಡುಕುಗಳಿಂದ ರಕ್ಷಣೆ ಪಡೆಯಲು ಉಪದೇಶಿಸುತ್ತಾ ನೈಜ ಅಹ್ಮದಿಯ ಚಿಹ್ನೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಈಗ ಪ್ರಾರ್ಥನೆ, ಇಸ್ತಿಗ್‌ಫಾರ್, ಆರಾಧನೆ, ಆತ್ಮಪರಿಶುದ್ಧಿಯಲ್ಲಿ ನಿರತರಾಗಬೇಕು. ಆ ರೀತಿ ನೀವು ಅಲ್ಲಾಹನ ಅನುಗ್ರಹಗಳಿಗೆ ಮತ್ತು ಅವನ ವಾಗ್ದಾನಗಳಿಗೆ ಪಾತ್ರರಾಗುವಿರಿ. ಅಲ್ಲಾಹನು

ನನ್ನೊಂದಿಗೆ ದೊಡ್ಡ ದೊಡ್ಡ ವಾಗ್ದಾನಗಳನ್ನು ಮಾಡಿರುವನು. ಭವಿಷ್ಯವಾಣಿಗಳನ್ನು ಅರುಹಿರುವನು. ಅವುಗಳು ಈಡೇರುವುವು ಎಂದು ನನಗೆ ದೃಢವಿಶ್ವಾಸವಿದೆ. ಆದರೆ ನೀವು ಅವುಗಳ ಬಗ್ಗೆ ಅನಾವಶ್ಯಕವಾಗಿ ಅಹಂಭಾವಿಗಳಾಗಬೇಡಿರಿ. ಪ್ರತಿಯೊಂದು ರೀತಿಯ ಅಸೂಯೆ, ದ್ವೇಷ, ಪರದೂಷಣೆ, ಅಹಂಭಾವ, ಹೆಮ್ಮೆ, ದುಷ್ಕೃತ್ಯಗಳು ಮೊದಲಾದುವುಗಳ ಬಾಹ್ಯ ಮತ್ತು ಅಂತರಂಗದ ಮಾರ್ಗಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಉದಾಸೀನತೆ ಮತ್ತು ನಿರ್ಲಕ್ಷ್ಯತೆಯಿಂದಲೂ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ನೆನಪಿಡಿರಿ, ಮುತ್ತಖಿಗಳ ಅಂತಿಮಗತಿ ಯಾವಾಗಲೂ ಉತ್ತಮವಾಗಿರುತ್ತದೆ. ಅವರ ಬಗ್ಗೆ ಅಲ್ಲಾಹನು ಹೇಳಿದ್ದಾನೆ: **ವಲ್ ಆಖಿಬತು ಲಿಲ್ ಮುತ್ತಖೀನ್.** ಆದುದರಿಂದ ಮುತ್ತಖಿಯಾಗುವ ಬಗ್ಗೆ ಚಿಂತಿಸಿರಿ. ಉತ್ತಮ ಅಂತಿಮಗತಿ ಮುತ್ತಖಿಗಳದ್ದೇ ಆಗಿರುತ್ತದೆ.

ಅಲ್ಲಾಹನು ನಮಗೆ ನೈಜ ಅಹ್ಮದಿಗಳಾಗುವ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಅನುಷ್ಠಾನಕ್ಕೆ ತರುವ ಭಾಗ್ಯ ದಯಪಾಲಿಸಲಿ. ನಾವು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವವರೂ ಅವನ ಸಂಪ್ರೀತಿಯನ್ನು ಗಳಿಸುವವರೂ ಆಗೋಣ. ನಾವು ನಮ್ಮ ಕರ್ಮಗಳನ್ನು ಸುಧಾರಣೆ ಮಾಡುವವರೂ ನಮ್ಮ ಜ್ಞಾನವನ್ನು ವರ್ಧಿಸುವ ಕಡೆಗೆ ಗಮನಿಸುವವರೂ ಆಗೋಣ. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವವರಾಗೋಣ. ಅಲ್ಲಾಹನು ನಮಗೆಲ್ಲರಿಗೂ ತೌಫೀಕ್ ನೀಡಿ ಅನುಗ್ರಹಿಸಲಿ – ಆಮೀನ್.

ಇಂದಿನ ಕಾಲದಲ್ಲಿ ಪಾಕಿಸ್ಥಾನದ ಸ್ಥಿತಿಯ ಬಗ್ಗೆ ಪ್ರಾರ್ಥಿಸಿರಿ. ಪಾಕಿಸ್ಥಾನಿಗಳು ಸ್ವತಃ ತಮ್ಮ ಬಗ್ಗೆ ಪ್ರಾರ್ಥಿಸಬೇಕು. ಅಲ್ಲಾಹನು ಅವರನ್ನು ಪ್ರತಿಯೊಂದು ಕೆಡುಕಿನಿಂದ ರಕ್ಷಿಸಲಿ. ದೇಶದೊಳಗೆ ಗಲಭೆ ಗೊಂದಲಗಳು ಜಾರಿಯಲ್ಲಿವೆ. ಅಲ್ಲಾಹನು ಅವುಗಳ ಕೆಡುಕುಗಳಿಂದ ದೇಶವನ್ನು ರಕ್ಷಿಸಲಿ. ಲೋಕದ ಬಗ್ಗೆಯೂ ಪ್ರಾರ್ಥಿಸಿರಿ. ಅದು ಈಗ ವೇಗವಾಗಿ ಯುದ್ಧದ ಕಡೆಗೆ ಸಾಗುತ್ತಿದೆ. ಅಮೇರಿಕ ಮತ್ತು ರಶ್ಯ ಯುದ್ಧದ ಸಿದ್ಧತೆಗಳನ್ನು ಮಾಡುತ್ತಿವೆ. ವಾಸ್ತವಿಕವಾಗಿ ಈ ದೇಶಗಳು ತಮ್ಮ ಶ್ರೇಷ್ಠ ಸ್ಥಾನವನ್ನು ಸ್ಥಾಪಿಸಲು ಇಚ್ಛಿಸುತ್ತಿವೆ. ಆದರೆ ಅವರು ಹೇಳುವುದು ನಾವು ದೌರ್ಜನ್ಯ ಪೀಡಿತರಿಗೆ ಅವರ ಹಕ್ಕುಗಳನ್ನು ಕೊಡಿಸಲು ಇಚ್ಛಿಸುತ್ತೇವೆ ಎಂದು. ವಾಸ್ತವದಲ್ಲಿ ಈ ಜನರು ದೌರ್ಜನ್ಯ ಪೀಡಿತರಿಗೆ ಹಕ್ಕುಗಳನ್ನು ಕೊಡಿಸುವ ಹೆಸರಿನಲ್ಲಿ ಮುಸ್ಲಿಮ್ ದೇಶಗಳನ್ನು ನಾಶಮಾಡಲು ಇಚ್ಛಿಸುತ್ತಿದ್ದಾರೆ. ಅಲ್ಲಾಹನು ಮುಸ್ಲಿಮರಿಗೆ ಸಹ ಬುದ್ಧಿ ನೀಡಲಿ. ಅವರು ಈ ಜನರಿಂದ ಸಹಾಯ ಪಡೆಯುವುದಕ್ಕೆ ಬದಲಾಗಿ ಸ್ವತಃ ತಮ್ಮ ಬಗ್ಗೆ ತೀರ್ಮಾನ ಮಾಡುವವರಾಗಲಿ. ತಮ್ಮ ಪ್ರಜೆಗಳ ಹಕ್ಕುಗಳನ್ನು ನೀಡುವವರಾಗಲಿ. ಪ್ರಜೆಗಳು ಸಹ ತಮ್ಮ ಸರಕಾರದ ಹಕ್ಕುಗಳನ್ನು ನೀಡುವವರಾಗಲಿ. ಇಸ್ಲಾಮಿನ ಹೆಸರಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಮಾಡುವ ಗುಂಪುಗಳನ್ನು ಅಲ್ಲಾಹನು ಹಿಡಿಗೂಡಲಿ. ಎರಡು ಪಕ್ಷಗಳವರಿಗೂ ಅಲ್ಲಾಹನು ಬುದ್ಧಿ ನೀಡಲಿ. ಅವರು ಈ ಕಾಲದ ಇಮಾಮರನ್ನು ನಂಬುವವರಾಗಲಿ. ಏಕೆಂದರೆ ರಕ್ಷಣೆಗೆ ಇದಲ್ಲದೆ ಅನ್ಯಮಾರ್ಗವಿಲ್ಲ. ಅಲ್ಲಾಹನು ಮುಸ್ಲಿಮರಿಗೆ ಬುದ್ಧಿ ನೀಡಲಿ. ಮುಸ್ಲಿಮರು ದೌರ್ಜನ್ಯಗಳ ಪಾಲುಗಾರರಾಗುವ ಬದಲು ಇಸ್ಲಾಮಿನ ವಾಸ್ತವಿಕ ಉಪದೇಶ ಪ್ರಕಾರ ಪ್ರೀತಿ ಮತ್ತು ಭ್ರಾತೃತ್ವದ ಉಪದೇಶವನ್ನು ಸಾರ್ವತ್ರಿಕವಾಗಿ ಹರಡುವವರಾಗಲಿ. ಅಲ್ಲಾಹನ ಹಕ್ಕುಗಳನ್ನು ಈಡೇರಿಸುವವರಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Basharat, Spain. On 13-04-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon